ಓ.ಎಸ್. ನಂಬರ್ಃ *9/2019*

**PW-1**

**<u>ದಿನಾಂಕಃ24.06.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಕೆ.ಜಿ.ಪಿ. ವಕೀಲರಿಂದಃ</u>**

ನನ್ನ ತಂದೆ ಹಾಗೂ ಪ್ರತಿವಾದಿ ನಂ.1 ಇಬ್ಬರು ಅಣ್ಣ-ತಮ್ಮಂದಿರು ಎಂದರೆ ಸರಿ. ನನ್ನ ತಂದೆಯ ಜೀವಿಂತ ಕಾಲದಲ್ಲಿ ಪ್ರತಿವಾದಿ ನಂ.1 ರವರೊಂದಿಗೆ ದಾವಾ ಆಸ್ತಿಯ ವ್ಯವಹಾರ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದೂವರೆದು ಸ್ವಲ್ಪ ಹಣ ನೀಡಿ ಹೊಲ ಮಾಡಬೇಕು ಎಂದು ಮಾತಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ 2017 ರಲ್ಲಿ ಮರಣ ಹೊಂದಿರುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂ.285/2 ಎಂದು ಇರುತ್ತದೆ.

ದಿಃ28.07.2000 ನೇ ಇಸ್ವಿಯಲ್ಲಿ ಸದರಿ ದಾವಾ ಆಸ್ತಿಯ ಹಕ್ಕನ್ನು ಪ್ರತಿವಾದಿ ನಂ.1 ರವರಿಗೆ ನನ್ನ ತಂದೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-9 ರಂತೆ ನಮ್ಮ ತಂದೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದೂವರೆದು ಅದು ಖೊಟ್ಟಿ ದಾಖಲೆ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ ಜೀವಿಂತ ಕಾಲದಲ್ಲಿ ಪ್ರತಿವಾದಿ ನಂ.1 ರವರಿಂದ ರೂ.5 ಲಕ್ಷಗಳನ್ನು ತೆಗೆದುಕೊಂಡು ನಿಪಿ-1 ರಂತೆ ಹಕ್ಕು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಆ ನಂತರ ಪ್ರತಿವಾದಿ ನಂ.1 ರವರು ಪ್ರತಿವಾದಿ ನಂ.2 ಮತ್ತು ಪ್ರತಿವಾದಿ ನಂ.3 ರವರಿಗೆ ಹಕ್ಕು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರಸುತ್ತ ದಾವಾ ಸ್ವತ್ತು ಪ್ರತಿವಾದಿ ನಂ.2 ಮತ್ತು ಪ್ರತಿವಾದಿ ನಂ.3 ರವರ ಕಬ್ಜೆಯಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದೂವರೆದು ಅವರು ಖೊಟ್ಟಿ ದಾಖಲೆ ಸೃಷ್ಟಿ ಮಾಡಿರುತ್ತಾರೆ ಎಂದು ನುಡಿಯುತ್ತ್ತಾರೆ. ನಮ್ಮ ತಂದೆ ಮತ್ತು ಪ್ರತಿವಾದಿ ನಂ.1 ನಡುವೆ ಸಂಬಂಧ ಸರಿಯಾಗಿ ಇತ್ತು ಎಂದರೆ ಸರಿ. ನಮ್ಮ ತಂದೆಯು ಹಣದ ಅಡಚಣೆಯ ಸಲುವಾಗಿ ಪ್ರತಿವಾದಿ ನಂ.1 ಕಡೆಯಿಂದ ಹಣವನ್ನು ಪಡೆದಿದ್ದರು ಎಂದರೆ ಸಾಕ್ಷಿಯು ನಮ್ಮ ಹೊಲವನ್ನು ಉಳಿಮೆಗಾಗಿ ಅವರಿಗೆ ನೀಡಿ ಹಣ ಪಡೆದಿರುತ್ತಾರೆ ಎಂದರೆ ನುಡಿಯುತ್ತಾರೆ. ಪ್ರತಿವಾದಿ ನಂ.1 ಒಕ್ಕಲುತನ ಮತ್ತು ವ್ಯವಹಾರ ಮಾಡುತ್ತಿದ್ದರು, ಪ್ರತಿವಾದಿ ನಂ.1 ರವರ ಬಳಿ ಉಳಿಮೆ ಮಾಡಲು ಎತ್ತುಗಳು ಇದ್ದವಾ ಎಂದರೆ ಸಾಕ್ಷಿಯು ಎತ್ತುಗಳು ಇರಲಿಲ್ಲ ಬಾಡಿಗೆಗೆ ತರುತಿರಬಹುದು ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.1 ಇವರು ತಮ್ಮ ಭೂಮಿಯನ್ನು ಉಳಿಮೆ ಮಾಡಲು ಬೇರೆಯವರಿಗೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ನೀಡಿರಬಹುದು ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.1 ಇವರು ಪೆಪ್ಸಿ ವ್ಯವಹಾರ ಮಾಡುತ್ತಿದ್ದರು, ಆ ವ್ಯವಹಾರ ದಿಂದ ಸಾಕಷ್ಟು ಆದಾಯ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ನನಗೆ ಒಬ್ಬ ತಂಗಿ ಮತ್ತು ಇಬ್ಬರು ಸಹೋದರರು ಇರುತ್ತಾರೆ.

**ಓ.ಎಸ್. ನಂಬರ್: *9/2019***

ನಮ್ಮ ತಂದೆ ನನ್ನ ಹಾಗೂ ನನ್ನ ತಂಗಿ, ಸಹೋದರರ ಮದುವೆಯನ್ನು ಪ್ರತಿವಾದಿ ನಂ.1 ರವರ ಕಡೆಯಿಂದ ಹಣ ಪಡೆದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಬರೆದಿರುವ ಸಂಗತಿಗಳು ನನಗೆ ಗೊತ್ತಿವೆ. ನನ್ನ ತಾತನನಿಂದ ನನ್ನತ ಂದೆಯ ಹೆಸರಿಗೆ ಜಮೀನು ಬಂದಿದ್ದು, ಆ ನಂತರ ಪ್ರತಿವಾದಿಯರು ತಮ್ಮ ಹೆಸರಿಗೆ ಖೊಟ್ಟಿ ದಾಖಲಾತಿಗಳನ್ನು ಸೃಷ್ಟಿಸಿ ತಮ್ಮ ಹೆಸರುಗಳನ್ನು ಸೇರಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಚೆಕ್ ಬಂದಿ ಹೇಳಲು ಬರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರ ಮತ್ತು ವಾದ ಪತ್ರದಲ್ಲಿ  ದಾವಾ ಆಸ್ತಿಯ ಚೆಕ್ ಬಂದಿ ತಿಳಿಸಿರುತ್ತೇನೋ ಇಲ್ಲವೋ ಎಂಬುವುದು ನನಗೆ ಗೊತ್ತಿಲ್ಲ.

ನನ್ನ ತಂದೆ ಜೀವಿಂತ ಕಾಲದಲ್ಲಿ ದಿಃ28.07.2000 ರಲ್ಲಿ ಪತಿವಾದಿ ನಂ.1 ರವರಿಂದ ಹಣ ಪಡೆದು ದಾವಾ ಆಸ್ತಿಯನ್ನು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 2000 ನೇ ಇಸ್ವಿಯಲ್ಲಿ ನನ್ನ ವಯಸ್ಸು 17-18 ವರ್ಷ ಇರಬಹುದು, ನನಗೆ ಮರಾಠಿ ಭಾಷೆಯಲ್ಲಿ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಆಂಗ್ಲದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ.  2000 ನೇ ಇಸ್ವಿಯಲ್ಲಿ ನನಗೆ ಸ್ವಲ್ಪ ತಿಳುವಳಿಕೆ ಇತ್ತು, ನನ್ನ ತಂದೆ ನಮ್ಮ ಕುಟುಂಬಂದ ಎಲ್ಲಾ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನಾವೆಲ್ಲರೂ ನಮ್ಮ ತಂದೆಗೆ ನಮ್ಮ ಜವಾಬ್ದಾರಿಗಳನ್ನು ನಮ್ಮ ತಂದೆಯವರಿಗೆ ಇತ್ತು ಎಂದರೆ ಸರಿ. ನಮ್ಮ ತಂದೆಯವರು ಯಾವುದೇ ವ್ಯವಹಾರ ಮಾಡಬೇಕಾದಲ್ಲಿ ನಮ್ಮ ಜೊತೆ ಚರ್ಚಿಸುತ್ತಿದ್ದರು ಮತ್ತು ಚರ್ಚಿಸಿ ಮಾಡುತ್ತಿದ್ದರು ಎಂದರೆ ಸರಿ.  ನಮ್ಮ ತಂದೆಯವರು ಪ್ರತಿವಾದಿ ನಂ.1 ರವರಿಂದ ಹಣ ಪಡೆದು ಅವರ ಪರವಾಗಿ ನಿಪಿ-9 ರಂತೆ ಹಕ್ಕು ಬಿಟ್ಟು ಮಾಡಿ ಕೊಟ್ಟಿರುತ್ತಾರೆ ಎಂದರೆ  ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರಸ ಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ